ಋತುರಾಜನದು ಕೇರಿಯ ಕೊನೆಯ ಮನೆ. ಅದರಾಚೆಗೆ ಮೊದಲಿಗೆ ಅವನದೇ ತೋಟ. ನಂತರ ಮೇಷ್ಟ್ರರದ್ದು. ಹೀಗೆ ತಮ್ಮ ತೋಟಕ್ಕೆ ಹೋಗಲಿಕ್ಕೆ ಋತುರಾಜನ ಮನೆಯೆದುರೇ ಹಾದು ಅವನ ತೋಟವನ್ನೇ ದಾಟಬೇಕಾದ ಅನಿವಾರ್ಯತೆ ಮೇಷ್ಟ್ರರದ್ದು. ಈ ಮುನ್ನ ಯಾರೋ ಒಂದೇ ಮನೆಯವರದಾಗಿದ್ದ ಈ ತೋಟಗಳು ಕಾಲಾಂತರದಲ್ಲಿ ವಿಭಾಗವಾಗಿ, ಇಬ್ಬಿಬ್ಬರ ಪಾಲಾಗಿ ಹೀಗೆ ವಿವಾದಿತವಾಗಿದ್ದವು. ಹಾಗೆ ನೋಡಿದರೆ ಈ ಮೊದಲಿದ್ದ ಗೋವಿಂದರಾಮರು, ಋತುರಾಜನಿಗೆ ಜಮೀನು ಮಾರುವ ಮೊದಲೇ ಎಂಟಡಿ ರಸ್ತೆಯನ್ನು ಮೇಷ್ಟರ ಓಡಾಟಕ್ಕೆ ಬಿಟ್ಟು, ತಮ್ಮ ಅಂಗಳಕ್ಕಷ್ಟೇ ಬೇಲಿ ಕಟ್ಟಿಕೊಂಡಿದ್ದರು. ಆದರೆ ಅದನ್ನು ಕೊಂಡ ಋತುರಾಜ ಮಾತ್ರ ಇದ್ದಕ್ಕಿದ್ದಂತೆ ಆ ರಸ್ತೆಯ ಮೇಲೆ ತನ್ನ ಪಾರಮ್ಯ ಸಾಧಿಸಿಬಿಟ್ಟ. ಒಬ್ಬ ರಾಚಯ್ಯ ಮೇಷ್ಟರಲ್ಲದೆ ಇನ್ಯಾರಿಗೂ ಆ ದಾರಿಯ ಅಗತ್ಯ ಇರಲಿಲ್ಲವಾದ್ದರಿಂದ ಊರಿನ ಇತರರ‍್ಯಾರೂ ಅದರ ಬಗ್ಗೆ ಅಷ್ಟಾಗಿ ತಲೆ ಕೆಡಿಸಿಕೊಳ್ಳಲಿಲ್ಲ. ಕೆಡಿಸಿ ಕೊಂಡವರಾದರೂ ಋತುರಾಜನ ಹರಿತ ಬಾಯನ್ನು ಎದುರಿಸಲಾಗದೇ ಹಿಂತಿರುಗಿದರು.



ಋತುರಾಜನ ಅಟಾಟೋಪಗಳೆಲ್ಲವಕ್ಕೂ ಅಭೂತಪೂರ್ವ ಬಹುಮತ ಕೊಡುತ್ತಿದ್ದುದು ಅವನಮ್ಮ ಚೀರು. 'ಅದೆಲ್ಲ ನಮ್ದೇ ಜಾಗ್ವೇ. ಆ ಮೇಷ್ಟ್ರ ಇಪ್ಪ ಜಾಗಾನೂ ನಮ್ದೇ! ಹಾಂಗ್ ನೋಡೀರೆ ಅವ್ರ್ ಮನಿ ಬಾಗ್ಲತ್ರಾನೇ ನಾವ್ ಬೇಲಿ ಹಾಕ್ಕಿತ್. ಪಾಪ ಅಂದೇಳಿ ಬಿಟ್ಟೋ' ಎಂದಿದ್ದಳು. ಇನ್ನೊಂಚೂರು ಗಟ್ಟಿ ಇದ್ದಿದ್ದರೆ ಮೇಷ್ಟರ ಬೆಡ್ರೂಮನ್ನೂ ಸೇರಿಸಿಯೇ ಬೇಲಿ ಹಾಕುತ್ತಿದ್ದಳೇನೋ? ಪುಣ್ಯಕ್ಕೆ ವಯಸ್ಸಾಗಿದ್ದರಿಂದ ಅವಳ ರಭಸ ಸ್ವಲ್ಪ ಕಡಿಮೆಯಾಗಿತ್ತು. ಅಷ್ಟಾದರೂ ಮೊನ್ನೆ ಕೇರಿಯ ಮನೆಗಳಿಗೆಂದು ಗ್ರಾಮ ಪಂಚಾಯ್ತಿಯವರು ಹಾಕಿಸಿದ್ದ ನಲ್ಲಿಯ ಸಾರ್ವಭೌಮತ್ವ ತನ್ನದೇ ಎಂದು ಅದಕ್ಕೂ ಬೀಗ ಹಾಕಿದ್ದಳು. ಆದರೆ, ಇವಳಷ್ಟೇ ಘಟವಾಣಿಯಾದ ಶಂಭಕ್ಕ ಕೊಡದಲ್ಲಿ ಬಡಿದಿದ್ದರಿಂದ ಬೀಗ ತೆಗೆದು ನೀರು ಬಿಟ್ಟಿದ್ದಳು.

* * *

ಇಷ್ಟು ದಿನ ಕೋರಸ್ ಹಾಡುವ ಸಹ ಗಾಯಕರಂತೆ ಆಗಾಗ ಬಾಯಿ ತೆರೆದು ಸುಮ್ಮನಾಗುತ್ತಿದ್ದ ಚೀರು ಆ್ಯಂಡ್ ಫ್ಯಾಮಿಲಿ ಈಗ ಇದ್ದಕ್ಕಿದ್ದಂತೆ ಮೆರೆಯುತ್ತಿರುವುದಕ್ಕೆ ಕಾರಣ ಋತುರಾಜ 'ಗ್ರಾಮ ಪಕ್ಷ'ದ ಅಭ್ಯರ್ಥಿ ಜಗದೀಶರ ಹಿಂಬಾಲಕನಾಗಿದ್ದು. ಮೂರ್ನಾಡಿ ವಿಧಾನಸಭಾ ಕ್ಷೇತ್ರಕ್ಕೆ ಆಗಷ್ಟೇ ಬಲಗಾಲಿಟ್ಟು ಒಳಬಂದಿದ್ದ ಜಗದೀಶರ ಮನೆಗೆ ಎಡಗಾಲಿಟ್ಟು ಒಳಗೆ ಹೋದವನು ಋತುರಾಜ. ಸುಮಾರು ಎರಡು ಸಾವಿರಕ್ಕೂ ಅಧಿಕ ಮತದಾರರಿರುವ ಬಣಗಲು ಗ್ರಾಮದ ಕಟ್ಟಕಡೆಯ ಮುದುಕಿಯ ಮತವೂ ನಿಮಗೇ ಬೀಳುವಂತೆ ಮಾಡುತ್ತೇನೆ ಎಂದು ನಂಬಿಸಿದ ಋತುರಾಜನ ಎಲ್ಲ ಅಕ್ರಮ ಆಟಾಟೋಪಗಳಿಗೂ ಅವರು ಬೆಂಗಾವಲಾಗಿ ನಿಂತುಬಿಟ್ಟರು.

ಋತುರಾಜನಿಗೆ ಜಗದೀಶರು ಸಮೀಪವಾಗಿದ್ದೇ ಎಂಪಿಎಂನವರೊಟ್ಟಿಗಿನ ಅವನ ಜಗಳದಿಂದ. ಮನೆಯ ಹಿಂದಿರುವ ಒಂದೆಕರೆ ಸಾರ್ವಜನಿಕ ಜಾಗಕ್ಕೆ ಋತುರಾಜ ಹಾಕಿದ ಬೇಲಿ ಅವನ ಗುಳುಂ ಸ್ವಾಹಾ ಅಭಿಯಾನದ ಮೊಟ್ಟಮೊದಲ ಹೆಜ್ಜೆಯಾಗಿತ್ತು. ಅದನ್ನು ಹಾಕುವ ಮೊದಲು ಹಾಗೂ ಹಾಕಿದ ಮೇಲೆ ಸಹಾ ಅವನಿಗೆ ಸ್ವಲ್ಪ ದಿನ ಅದೊಂದು ತೆರನಾದ ಭಯ ಕಾಡಿತ್ತು. ಆದರೆ ಆಚೆಗಿನ ಎಂಪಿಎಂ ಕಾಡು ಹಾಗೂ ಈಚೆಯ ಮನೆಯ ನಡುವಿನ ಅನುಪಯುಕ್ತ ಖಾಲಿ ಜಾಗದ ಒಡೆತನಕ್ಕಾಗಿ ಈ ಸಿಡುಕನ ಹತ್ತಿರ ಜಗಳಕ್ಕಿಳಿಯುವುದು ಯಾರಿಗೂ ಬೇಕಿರಲಿಲ್ಲ. ಸುಮ್ಮನೆ ಮಾತಿಗೆ ಪ್ರಶ್ನೆ ಮಾಡಿದವರಿಗೂ ಅವನು ದೊಡ್ಡ ದನಿಯಲ್ಲೇ ಮರ್ಯಾದೆ ತೆಗೆದಿದ್ದ. ಹೀಗಾಗಿ ಆ ಜಾಗ ಯಾವ ವಿರೋಧವೂ ಇಲ್ಲದೆ ತೆಪ್ಪಗೆ ಅವನ ಒಡೆತನವನ್ನು ಒಪ್ಪಿಕೊಂಡುಬಿಟ್ಟಿತು.

ಈ ಏಕಪಕ್ಷೀಯ ವಿಜಯವು ಋತುರಾಜನಿಗೆ ಹಲವು ಪಾಠಗಳನ್ನು ಕಲಿಸಿತು. ಯಾವುದೇ ಖಾಲಿ ಜಾಗಕ್ಕೆ ಮೊದಲು ಬೇಲಿ ಹಾಕಬೇಕು. ಯಾರಾದರೂ